ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:2433/2014

ಚಾಸಾ: 2 ಪ್ರಾಸಾ:2

ದಿನಾಂಕ: 04.05.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಶೇಖರ ಶೆಟ್ಟಿ |
| ತಂದೆಯ ಹೆಸರು | : | ನಾರಾಯಣ ಶೆಟ್ಟಿ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ನೇರಳ ಕಟ್ಟೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನ್ಯಾಯಾಲಯದ ಮುಂದೆ ಇರುವ ಆರೋಪಿ ನೋಡಿ ಪರಿಚಯವಿದೆ, ಅವರು ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ಈ ಪ್ರಕರಣದಲ್ಲಿ ನನಗೆ ಯಾವುದೇ ಮೋಸವಾಗಿಲ್ಲ, ನಾನು ಯಾವುದೇ ದಾಖಲೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:**

ನಾನು ನೇರಳಕಟ್ಟೆಯ ಕೆನರಾ ಬ್ಯಾಂಕಿನಲ್ಲಿ ರಿಕ್ಷಾ ತೆಗೆಯಲು ವಾಹನದ ಲೋನ್ ಪಡೆಯಲು ಬ್ಯಾಂಕ್ ಖಾತೆ ಮಾಡಿಸಿದ್ದು ಅದರ ನಂಬರ್ 3013 ಆಗಿರುತ್ತದೆ ಎಂದರೆ ಸರಿ. ಈ ಮೇಲೆ ಓದಿ ಹೇಳಿದಂತೆ ನಿಪಿ-1 ರಂತೆ ಪೊಲೀಸರಿಗೆ ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ. ನಾನು ನೇರಳಕಟ್ಟೆ ಕೆನರಾ ಬ್ಯಾಂಕಿನಿಂದ 80 ಸಾವಿರ ಲೋನ್ ಪಡೆದಿರುತ್ತೇನೆ ಎಂದರೆ ಸರಿ. ಆ ಸಾಲವನ್ನು ಬ್ಯಾಂಕಿಗೆ ಕಂತು ಕಂತಾಗಿ ಹಣ ಕಟ್ಟುತ್ತಿದ್ದೆ ಎಂದರೆ ಸರಿ. ದಿ: 09-03-2007 ರಂದು ನನ್ನ ಪರಿಚಯದ ಆರೋಪಿಗೆ 34 ಸಾವಿರ ಹಣವನ್ನು ನನ್ನ

ಲೋನಿನ ಲೆಕ್ಕಕ್ಕೆ ಕಟ್ಟುವಂತೆ ನೀಡಿದ್ದು, ಆ ಹಣಕ್ಕೆ ಅವರು ಯಾವುದೇ ರಶೀದಿ ನೀಡಿಲ್ಲ ಎಂದರೆ ಸರಿಯಲ್ಲ. ನನ್ನಿಂದ ಬ್ಯಾಂಕಿಗೆ ಕಟ್ಟಲು ತೆಗೆದುಕೊಂಡ ಹಣವನ್ನು ಅವರ ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದು ಈ ವಿಚಾರ ಬ್ಯಾಂಕಿನ ಮ್ಯಾನೇಜರ್ ಗೆ ತಿಳಿದು ಆರೋಪಿಯ ವಿರುದ್ದ ಕೇಸು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಂತರ ಬ್ಯಾಂಕ್ ಮ್ಯಾನೇಜರ್ ಕೇಸು ದಾಖಲಿಸಿದ ವಿಚಾರ ತಿಳಿದು ಆರೋಪಿ ದಿಃ 31-03-2008 ರಂದು 16 ಸಾವಿರ ರೂಪಾಯಿ ಮತ್ತು ದಿಃ 07-07-2008 ರಂದು 18 ಸಾವಿರ ರೂಪಾಯಿಯನ್ನು ಬ್ಯಾಂಕಿನ  ನನ್ನ ಲೋನ್ ಅಕೌಂಟ್ ಗೆ ಹಣ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನನ್ನಿಂದ ಪಡೆದ ಹಣವನ್ನು ಆತನ ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದು, ಆತನ ವಿರುದ್ದ ಕೇಸು ದಾಖಲಾದ ನಂತರ ಬ್ಯಾಂಕಿಗೆ ಹಣ ಕಟ್ಟಿ ನನಗೆ ಮತ್ತು ಬ್ಯಾಂಕಿಗೆ ಮೋಸ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲೆ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದ್ರಿ ಹೇಳಿಕೆಯನ್ನು ನಿಪಿ-35 ಎಂದು ಗುರುತಿಸಲಾಯಿತು.

ನನ್ನ ಪಾಸ್ ಪುಸ್ತಕ ನನ್ನ ಬಳಿ ಇದೆಯೇ ಎಂಬ ಬಗ್ಗೆ ನಾನು ಮನೆಯಲ್ಲಿ ಹುಡುಕಬೇಕು. ನಾನು ಬ್ಯಾಂಕಿಗೆ ಹಣ ಕಟ್ಟಿದ್ದ ಬಗ್ಗೆ ರಶೀದಿಗಳು ತುಂಬಾ ವರ್ಷಗಳಾದ ಕಾರಣ ನನ್ನ ಬಳಿ ಇರುವುದಿಲ್ಲ. ನನ್ನ ಪಾಸ್ ಪುಸ್ತಕವನ್ನು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.ಆರೋಪಿ ನನ್ನ ಪರಿಚಯಸ್ಥರಾಗಿದ್ದರಿಂದ ಅವರಿಗೆ  ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ನಾನು ಅಟೋ ರಿಕ್ಷಾವನ್ನು ತೆಗೆದುಕೊಳ್ಳಲು ಲೋನ್ ನ್ನು ಮಾಡಿರುತ್ತೇನೆ. ನಾನು 2009 ರಲ್ಲಿ ಕೆನರಾ ಬ್ಯಾಂಕಿನಲ್ಲಿ ಲೋನ್ ಪಡೆದಿರುತ್ತೇನೆ. ಸದ್ರಿ ಲೋನ್ ನ್ನು  3 ವರ್ಷಗಳಲ್ಲಿ ತೀರಿಸಿರುತ್ತೇನೆ. ಹಳೆಯ ಸಾಲವಾಗಿದ್ದರಿಂದ ಲೋನ್ ತೀರಿದ ನಂತರ ದಾಖಲೆಗಳನ್ನು ಇಟ್ಟುಕೊಂಡಿರುವುದಿಲ್ಲ. ನಮ್ಮ ಮನೆಯಿಂದ ನೇರಳಕಟ್ಟೆಯ ಕೆನರಾ ಬ್ಯಾಂಕಿಗೆ 3 ಕಿ.ಮೀ ಇರುತ್ತದೆ. ನನ್ನ ಬಳಿ ದ್ವಿಚಕ್ರ ವಾಹನ ಇತ್ತು. ಬ್ಯಾಂಕಿಗೆ ಖುದ್ದಾಗಿ ಹೋಗಿ ವ್ಯವಹಾರಿಸಲು ನನಗೆ ತೊಂದರೆ ಇರಲಿಲ್ಲ. ಬ್ಯಾಂಕಿಗೆ ಲೋನ್ ಕಂತುಗಳನ್ನು ನಾನು ಖುದ್ದಾಗಿ ಹೋಗಿ ಕಟ್ಟುತ್ತಿದ್ದೆ ಎಂದರೆ ಸರಿ. ಬ್ಯಾಂಕಿನ ಬೇರೆ ಸಿಬ್ಬಂದಿಗಳಿಗೆ ಲೋನ್ ಕಟ್ಟುವಂತೆ ಹಣ ನೀಡಿಲ್ಲ ಎಂದರೆ ಸರಿ.

ನ್ಯಾಯಾಲಯದಿಂದ ಸಮನ್ಸ್ ಬಂದಿರುವುದನ್ನು ಹೊರತುಪಡಿಸಿ ಈ ಪ್ರಕರಣ ಏನು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಆರೋಪಿಯ ಬಳಿ ಸಾಲದ ಹಣ ಕಟ್ಟುವಂತೆ ನೀಡಿಲ್ಲ ಎಂದರೆ ಸರಿ. ನಾನು ಬ್ಯಾಂಕಿಗೆ ಹೋಗುತ್ತಿದ್ದಾಗ ಆರೋಪಿಯನ್ನು

ನೋಡಿರುತ್ತೇನೆ, ಅವರು ಏನು ಉದ್ಯೋಗ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಈ ಪ್ರಕರಣದಲ್ಲಿ ನನ್ನನ್ನು ಯಾವುದೇ ವಿಚಾರಣೆ ಮಾಡಿಲ್ಲ ಮತ್ತು ಹೇಳಿಕೆ ಪಡೆದಿಲ್ಲ ಎಂದರೆ ಸರಿ. ನಾನು ಪೊಲೀಸರಿಗೆ ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ನೀಡಿಲ್ಲ. ನನಗೆ ಆರೋಪಿಯಿಂದ ಯಾವುದೇ ಮೋಸವಾಗಿಲ್ಲ. ಆರೋಪಿಯು ನನಗೆ ತೀರ ಪರಿಚಿತರು ಅಲ್ಲ. ನಾನು ಆರೋಪಿಯೊಂದಿಗೆ ಯಾವುದೇ ಸಂಭಾಷಣೆ ಮಾಡಿಲ್ಲ. ಆರೋಪಿಗೆ ಸಹಾಯ ಮಾಡಿ ಸುಳ್ಳು ಸಾಕ್ಷ್ಯ ನುಡಿಯುವ ಅಗತ್ಯ ನನಗೆ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**